# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 233 |
| ಮಾನ್ಯ ಸದಸ್ಯರ ಹೆಸರು | ಡಾ: ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 13.09.2021 |
| ಪ್ರಶ್ನೆ | ಉತ್ತರ |
| (ಅ) ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿನ ಅಧ್ಯಯನ ಪೀಠಗಳ ಸಂಖ್ಯೆ ಎಷ್ಟು; | ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾನಿಲಯಗಳಲ್ಲಿನ ಅಧ್ಯಯನ ಪೀಠಗಳ ವಿವರ ಈ ಕೆಳಕಂಡಂತಿದೆ.- |

| ಕ್ರ. ಸಂ. | ವಿಶ್ವವಿದ್ಯಾನಿಲಯದ ಹೆಸರು | ಅಧ್ಯಯನ ಪೀಠಗಳ ಸಂಖ್ಯೆ |
|---|---|---|
| 1 | ಬೆಂಗಳೂರು ವಿಶ್ವವಿದ್ಯಾನಿಲಯ | 03 |
| 2 | ಮೈಸೂರು ವಿಶ್ವವಿದ್ಯಾನಿಲಯ | 25 |
| 3 | ಗುಲ್ಬರ್ಗ ವಿಶ್ವವಿದ್ಯಾನಿಲಯ, | 11 |
| 4 | ಕರ್ನಾಟಕ ವಿಶ್ವವಿದ್ಯಾನಿಲಯ | 16 |
| 5 | ಕುವೆಂಪು ವಿಶ್ವವಿದ್ಯಾನಿಲಯ | 08 |
| 6 | ಕನ್ನಡ ವಿಶ್ವವಿದ್ಯಾನಿಲಯ, ಹಂಪಿ | 12 |
| 7 | ಮಂಗಳೂರು ವಿಶ್ವವಿದ್ಯಾನಿಲಯ | 11 |
| 8 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ | 09 |
| 9 | ಜಾನಪದ ವಿಶ್ವವಿದ್ಯಾನಿಲಯ | - |
| 10 | ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ | 04 |
| 11 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯ | 02 |
| 12 | ತುಮಕೂರು ವಿಶ್ವವಿದ್ಯಾನಿಲಯ | 13 |
| 13 | ದಾವಣಗೆರೆ ವಿಶ್ವವಿದ್ಯಾನಿಲಯ | 02 |
| 14 | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ | 07 |
| 15 | ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ | - |
| 16 | ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ | - |
| 17 | ಬೆಂಗಳೂರು ನಗರ ವಿಶ್ವವಿದ್ಯಾನಿಲಯ | - |
| 18 | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ | - |
| 19 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ | - |
| 20 | ರಾಯಚೂರು ವಿಶ್ವವಿದ್ಯಾನಿಲಯ | - |
| 21 | ನೃಪತುಂಗ ವಿಶ್ವವಿದ್ಯಾನಿಲಯ | - |
| 22 | ಮಂಡ್ಯ ಕ್ಲಸ್ಟರ್ ವಿಶ್ವವಿದ್ಯಾನಿಲಯ | - |
| | **ಒಟ್ಟು ಅಧ್ಯಯನ ಪೀಠಗಳ ಸಂಖ್ಯೆ** | 123 |

....2

| | | |
|---|---|---|
| (ಆ) | ಅಧ್ಯಯನ ಪೀಠಗಳನ್ನು ಅಧ್ಯಯನ ಮತ್ತು ಸಂಶೋಧನೆ ಸಕ್ರೀಯಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು; | ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠಗಳನ್ನು ಅಧ್ಯಯನ ನಡೆಸಲು ಅನುವಾಗುವಂತೆ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸಂಪನ್ಮೂಲಗಳು ಹಾಗೂ ಪರಂಪರೆಯನ್ನು ಗಣವೃದ್ಧಿ ಹಾಗೂ ಉತ್ಕೃಷ್ಟಗೊಳಿಸುವ ಉದ್ದೇಶದಿಂದ ಭಾರತ ನಾಗರೀಕರಾಗಿರುವ ಅಥವಾ ಭಾರತೀಯ ಮೂಲದವರಾಗಿರುವ ನೋಬೆಲ್ ಪ್ರಶಸ್ತಿ ವಿಜೇತರು, ಶ್ರೇಷ್ಠ ಹಾಗೂ ಸುಪ್ರಸಿದ್ಧ ವ್ಯಕ್ತಿಗಳ ಹೆಸರಿನಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಹಾಗೂ ಈ ಪೀಠಗಳಿಗೆ ಅನುದಾನ ಒದಗಿಸುವ ಯೋಜನೆಯನ್ನು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಉಪಕ್ರಮಿಸಿ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ. |
| (ಇ) | ಅಧ್ಯಯನ ಪೀಠಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ; | |
| (ಈ) | ಅಧ್ಯಯನ ಪೀಠಗಳು ಸಕ್ರೀಯವಾಗಿ ನಡೆಯಲು ವಿಶ್ವವಿದ್ಯಾನಿಲಯಗಳು ವಿಫಲವಾಗಲು ಕಾರಣಗಳೇನು? | ವಿಶ್ವವಿದ್ಯಾಲಯಗಳು ಶೈಕ್ಷಣಿಕ ಸ್ವಾಯತ್ತತೆಯನ್ನು ಹೊಂದಿರುವ ಹಿನ್ನೆಲೆಯಲ್ಲಿ ಯುಜಿಸಿ ಮಾರ್ಗಸೂಚಿಗಳ ಪ್ರಕಾರ ಪೀಠಗಳಲ್ಲಿ ಅಧ್ಯಯನ ಹಾಗೂ ಸಂಶೋಧನೆಯನ್ನು ವಿಶ್ವವಿದ್ಯಾಲಯಗಳ ಹಂತದಲ್ಲಿಯೇ ಸಕ್ರೀಯಗೊಳಿಸಬೇಕಾಗುತ್ತದೆ.<br><br>ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರತವಾಗಿರುವ ಅಧ್ಯಯನ ಪೀಠಗಳ ಪೈಕಿ ಬಹುತೇಕ ಪೀಠಗಳಿಗೆ ಆರಂಭಿಕ ಮೂಲ ಧನವನ್ನು ರಾಜ್ಯ ಸರ್ಕಾರದಿಂದ ಮಂಜೂರು ಮಾಡಲಾಗಿದೆ. ಈ ಮೂಲಧನದಿಂದ ಲಭ್ಯವಾಗುವ ಬಡ್ಡಿ ಹಾಗೂ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಿ ಮೂಲಭೂತ ಸೌಕರ್ಯಗಳನ್ನು ವಿಶ್ವವಿದ್ಯಾಲಯಗಳಿಂದಲೇ ಕಲ್ಪಿಸಿಕೊಂಡು ಪೀಠಗಳ ಕಾರ್ಯನಿರ್ವಹಣೆಯನ್ನು ಮಾಡಬೇಕಾಗುತ್ತದೆ.<br><br>ಅಧ್ಯಯನ ಪೀಠಗಳನ್ನು ಸಕ್ರಿಯವಾಗಿಸಲು ಅಗತ್ಯ ಕ್ರಮವಹಿಸಲು ವಿಶ್ವವಿದ್ಯಾನಿಲಯಗಳಿಗೆ ಸೂಚಿಸಲಾಗುವುದು. |

ಸಂಖ್ಯೆ: ಇಡಿ 223 ಯುಎನ್‌ಇ 2021

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐಟಿ & ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.